

ಭಾಗಕ್ಕೆ ಕೆಡವಿ ಮತ್ತಷ್ಟು ಗಂಡಸಾಗಲು ಅಣಿಯಾದ. ಮೇಲೆ ಬಿದ್ದ. ಇಂಚಿಂಚೂ ಅವಳೊಳಗೆ ಇಳಿಯುತ್ತಾ ಹೋದ; ಅವಳು ಕದಡಿದಳು. ಮತ್ತಷ್ಟು ಆಳಕ್ಕಿಳಿದ; ಅವಳು ಬಾಡಿದಳು. ಕಾಮ ಅಬ್ಬರಿಸಿತು! ತನಗೇನಾಗುತ್ತಿದೆ ಎಂಬುದು ಅವಳಿಗೆ ಸ್ಪಷ್ಟವಾಗಿ ತಿಳಿಯುವಷ್ಟರಲ್ಲೇ ಎಲ್ಲವೂ ಮುಗಿದು ಹೋಗಿತ್ತು. ಆಕೆಯ ಸುತ್ತ ಅವನ ಕಾಮ ಹಬ್ಬಿತ್ತು. ಮೈಯ್ಯೆಲ್ಲಾ ನೋವು ಚಿಮ್ಮುತ್ತಿತ್ತು. ಇಡಿಯ ಹೆಣ್ತನವೇ ನಿಮಿಷಗಳಲ್ಲಿ ಕಮರಿಹೋದಂತೆ ಅನಿಸಿ ಬೆಳಕನ್ನೇ ಉಕ್ಕಿಸುವ ಅವಳ ಮುಖದಲ್ಲೂ ಗಾಢ ಇರುಳು ಮೂಡಿತು. ಅದೆಲ್ಲವನ್ನು ತಡೆದುಕೊಂಡು ಬದುಕುವಷ್ಟು ಗಟ್ಟಿ ಮನಸ್ಸಾಗಲೀ ದೇಹವಾಗಲೀ ಅವಳ ವಯಸ್ಸಿಗಿದ್ದಿರಲಿಲ್ಲ. ಹಸಿದ ಮೃಗದ ಬಾಯಿಗೆ ಸಿಕ್ಕ ಜಿಂಕೆಯಾಗಿದ್ದಳು. ಅವನು ತೃಷೆ ತೀರಿಸಿಕೊಂಡು ಜಾಗ ಖಾಲಿ ಮಾಡಿದ್ದ. ಅವಳು...

* * *

ಬಾನಪ್ಪ ಆ ಹಾಳು ಗುಡಿಯನ್ನು ತಲುಪಿ ಒಳಹೊಕ್ಕು ನೋಡುತ್ತಾನೆ; ರಂಗಮ್ಮ ಅರೆಬೆತ್ತಲಾಗಿ ಮಲಗಿದ್ದಾಳೆ, ಅಲ್ಲಲ್ಲ- ಯಾರೋ ಮಲಗಿಸಿದ್ದಾರೆ. ಈಗತಾನೇ ಪ್ರಾಯಕ್ಕೆ ಕಾಲಿಟ್ಟ ಕಾಡುಹೂವಿನಂಥ ಹುಡುಗಿ ರಂಗಮ್ಮ. ಯಾರೋ ಪಾಪಿಗಳು ಅವಳ ಮೇಲೆ ಮನಸೋಯಿಚ್ಛೆ ವಾಂಛೆ ತೀರಿಸಿಕೊಂಡಿದ್ದಾರೆ. ಇದೆಲ್ಲ ನೋಡುತ್ತಿದ್ದಂತೆ ಬಾನಪ್ಪ ಕಮರಿಹೋದ. ತನ್ನ ತಂಗಿ; ತನ್ನದೆಲ್ಲವೂ ಅವಳೇ ಆದ ತಾಯಿಯಂಥ ತಂಗಿಗೆ ಈಗ ಈ ಸ್ಥಿತಿ. ಆ ಕ್ಷಣಕ್ಕೆ ಅಣ್ಣನಾದ ಅವನಾದರೂ ಏನು ಮಾಡಿಯಾನು? ಅವಳಿನ್ನೂ ಬದುಕಿದ್ದಾಳಾ ಎಂಬುದೂ ಅವನಿಗೆ ತಿಳಿಯುತ್ತಿಲ್ಲ. ಕಣ್ಣೀರು ಅಂಕೆಮೀರಿ ಹರಿಯುತ್ತಿತ್ತು. ದೃಷ್ಟಿ ಕ್ರಮೇಣ ಮಂಜಾಗತೊಡಗಿತು. ತಂಗೀ ಎನ್ನುತ್ತಾ ಹತ್ತಿರ ಹೋದ. ಹೌದು ಇನ್ನೂ ಉಸಿರಿದೆ. ತನ್ನ ಅಂಗಿ ಬಿಚ್ಚಿ ಛಿದ್ರಗೊಂಡ ಅವಳ ಬಟ್ಟೆಗೆ ಹೊಚ್ಚಿದ. ಪುಟ್ಟ ಮಗುವಿನಂತೆ ಎತ್ತಿಕೊಂಡು ಆಸ್ಪತ್ರೆಯ ದಾರಿ ಹಿಡಿದ. ಹೊರಟ. ಆದರೆಷ್ಟು ದೂರ? ಆ ಪುಟ್ಟ ದೇಹ ಅಲ್ಲಿತನಕ ಉಸಿರಾಡಿದ್ದೇ ಹೆಚ್ಚು. ಹಾಳುಗುಡಿಯಿಂದಾಚೆ ಬರುವಷ್ಟರಲ್ಲಿಯೇ ಅವಳು ಪೂರಾ ಗೋಣು ಚೆಲ್ಲಿದಳು. ಮತ್ತಷ್ಟು ಘಾಸಿಗೊಂಡ. ದಾರಿ ಬದಲಿಸಿದ. ತನ್ನ ತಂಗಿಯನ್ನು ಈ ಸ್ಥಿತಿಯಲ್ಲಿ ಯಾರೂ ನೋಡಬಾರದೆಂದು ತನ್ನಲ್ಲೇ ನಿರ್ಧರಿಸಿದ. ನೇರವಾಗಿ ಊರ ಹೊರದಾರಿಯಿಂದಲೇ ಸ್ಮಶಾನ ತಲುಪಿ, ಅವಳಿಗೆ ನೋವಾಗದಿರಲಿ ಎಂಬಂತೆ ಸೂಕ್ಷ್ಮವಾಗಿ ಮಲಗಿಸಿದ. ಇಂಚಿಂಚೂ ನೋವು ತಿಂದ ನಿರ್ಜೀವ ದೇಹಕ್ಕೀಗ ಯಾವ ಪ್ರಜ್ಞೆ. ಸುಮ್ಮನೆ ಶಾಂತವಾಗಿ ಮಲಗಿದೆ. ಅಲ್ಲೇ ಇದ್ದ ಬಿದ್ದ ಚೂಪು ಕಲ್ಲುಗಳನ್ನು ತೆಗೆದುಕೊಂಡು ಗುಂಡಿ ತೋಡತೊಡಗಿದ. ಸುಮಾರು ಹೊತ್ತಿನ ನಂತರ ತಂಗಿಗೆ ತನ್ನ ಕೈಯ್ಯಾರೆ ತಾನೇ ತಯಾರಿಸಿದ ಶಾಶ್ವತ ಮನೆ ಸಿದ್ಧವಾಯಿತು. ಕೊನೆಯ ಬಾರಿ ಎಂಬಂತೆ ಅವಳ ಪಾದಕ್ಕೆ ಹಣೆ ಹಚ್ಚಿದ. ಮುತ್ತಿಟ್ಟ. ಮಗುವಿನಂತೆಯೇ ಅವಳನ್ನು ಎತ್ತಿ ಗುಂಡಿಯಲ್ಲಿ ಮಲಗಿಸಿದ. ತಾನೂ ಅದರಲ್ಲೇ ಮಲಗುವಂತೆನಿಸಿತು. ಆದರೆ ಈ ಸಾವಿಗೆ ನ್ಯಾಯ? ಸುಮ್ಮನಾದ. ಒಡಹುಟ್ಟಿದ ತಂಗಿ. ಅವಳಿಗೆ ಕಣ್ಣಲ್ಲಿ ದೂಳು ಬಿದ್ದರೂ ಚಡಪಡಿಸುವ ಅಣ್ಣ, ಮಣ್ಣು ಹಾಕಿದ. ಅದೇ ಸಮಯಕ್ಕೆ, ಆ ಪಾಪಿಯನ್ನ ಬಿಡೆನೆಂದೂ ಮಣ್ಣು ತೂರಿ ಶಪಥ ಮಾಡಿದ.

* * *

ಸತಿಪುರ ಹಾಗೇ ಇದೆ. ಏನೆಂದರೇನೂ ಬದಲಾವಣೆಯಿಲ್ಲ. ರಂಗಮ್ಮನ ಸುದ್ದಿ ಊರಿನ ನಾಲ್ಕು ದಿಕ್ಕಿಗೂ ಮುಟ್ಟಿದೆ. ಕೆಲವರು ಮರುಗಿದರು, ಕೆಲವರು ಲೊಚಗುಟ್ಟಿದರು. ಹೊಲೆಯರ ನೋವು ಗೌಣವಾಗಿ ಕಂಡಿತೇನೋ; ಇನ್ನು ಕೆಲವರು ಕಿವಿಯಿಂದ ತಲೆಗೆ ಹಾಕಿಕೊಳ್ಳಲೂ ಇಲ್ಲ. ತುಸು ಏನಾದರೂ ಹೌದೆನ್ನಬಹುದಾದ ಬದಲಾವಣೆಯಿದ್ದರೆ ಅದು ಹೊರಕೇರಿಯಲ್ಲಿ ಮಾತ್ರ. ಏಕೆಂದರೆ ಅದೇ ರಂಗಮ್ಮನ ತವರು. ಹಾರಪ್ಪನಿಗೂ ವಿಷಯ